# ಸಾಲಾರ್ ಪುರಿಯ ಸತ್ವ ಗ್ರೂಪ್‌ಗೆ ವಿಶ್ವಕರ್ಮ ಪ್ರಶಸ್ತಿ

**ಬೆಂಗಳೂರು:** ಭಾರತದ ಪ್ರಮುಖ ಆಸ್ತಿ ಅಭಿವೃದ್ಧಿ, ನಿರ್ವಹಣೆ ಮತ್ತು ಸಲಹಾ ಸಂಸ್ಥೆಯಾದ ಸಾಲಾರ್ ಪುರಿಯ ಸತ್ವ ಗ್ರೂಪ್ ಇತ್ತೀಚೆಗೆ ನವದೆಹಲಿಯಲ್ಲಿ ನಡೆದ 12ನೇ ಸಿಐಸಿಸಿ ವಿಶ್ವಕರ್ಮ ಪ್ರಶಸ್ತಿ 2021ರಲ್ಲಿ ವಿಜೇತರನ್ನಾಗಿ ಹೊರಹೊಮ್ಮಿದೆ. ಹೈದರಾಬಾದ್‌ನ ಸಲಾರ್ಪುರಿಯಾ ಸತ್ವ ಜ್ಞಾನ ನಗರ "ಅತ್ಯುತ್ತಮ ನಿರ್ಮಾಣ ಯೋಜನೆ ಸಾಧನೆ– ಕಟ್ಟಡ (ವಾಣಿಜ್ಯ) ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದೆ.

ಪ್ರಶಸ್ತಿ ಸ್ವೀಕರಿಸಿದ ಸಾಲಾರ್ ಪುರಿಯ ಸತ್ವ ಗ್ರೂಪ್ ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಬಿಜಯ್ ಅಗರ್ವಾಲ್ ಅವರು ಮಾತನಾಡಿ, "ಗಣ್ಯತೀರ್ಪುಗಾರರಿಂದ ಈ ಗೌರವವನ್ನು ಪಡೆದಿರುವುದಕ್ಕೆ ನಮಗೆ ಹೆಚ್ಚು ಸಂತೋಷವಾಗಿದೆ ಸಾಲಾರ್ ಪುರಿಯ ಸತ್ವದಲ್ಲಿ ವಿಶ್ವದರ್ಜೆಯ ವಿನ್ಯಾಸದ ಯೋಜನೆಗಳನ್ನು ನಿರಂತರವಾಗಿ ಆವಿಷ್ಕರಿಸುವುದು ಮತ್ತು ರಚಿಸುವುದು ನಮ್ಮ ಗುರಿಯಾಗಿದೆ. ಅತ್ಯಾಧುನಿಕ ಐಟಿ ಯೋಜನೆ ಮತ್ತು ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿ ನಮ್ಮ ಸಾಧನೆಗಳನ್ನು ಪ್ರಶಸ್ತಿ ಗುರುತಿಸುತ್ತದೆ. ಸಲಾರ್ಪುರಿಯಾ ಸತ್ವ ನಿರ್ಮಾಣದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಅತ್ಯುನ್ನತ ಮಾನದಂಡಗಳನ್ನು ಉತ್ಕೃಷ್ಟತೆಯ ನಿಜವಾದ ಸಂಕೇತವಾಗಿ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ.

ನಿರ್ಮಾಣ ಉದ್ಯಮ ಅಭಿವೃದ್ಧಿ ಮಂಡಳಿ (ಸಿ.ಐ.ಡಿ.ಸಿ.) ಭಾರತೀಯ ನಿರ್ಮಾಣ ಉದ್ಯಮದೊಂದಿಗೆ ಜಂಟಿಯಾಗಿ ಯೋಜನಾ ಆಯೋಗವು ಸ್ಥಾಪಿಸಿದ ಅತ್ಯುನ್ನತ ಸಂಸ್ಥೆಯಾಗಿದೆ. ಭಾರತೀಯ ನಿರ್ಮಾಣ ಉದ್ಯಮದಲ್ಲಿ ಉತ್ತಮ ಪದ್ಧತಿಗಳನ್ನು ಬೆಳೆಸಲು ಮತ್ತು ಜಾಗತಿಕ ಮಾನ್ಯತೆಯನ್ನು ಸಾಧಿಸಲು ಸಹಾಯ ಮಾಡಲು ಸಿ.ಐ.ಡಿ.ಸಿ. ಬದ್ಧವಾಗಿದೆ ಎಂದರು.